# ? ಕೇಳಿ ತಿಳಿಯಿರಿ ☆

[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರ ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು]

? ಶ್ರೀರಾಮಕೃಷ್ಣ ವಚನವೇದ ಭಾಗ-೧ ಓದಿ ಈ ಜನ್ಮ ಸಾರ್ಥಕವಾಗಿದೆ. ಮುಖಪುಟದ ಚಿತ್ರದಲ್ಲಿ ಶ್ರೀರಾಮಕೃಷ್ಣರು ಬಲಗೈ ಮೇಲೆತ್ತಿದ್ದಾರೆ, ಎಡಗೈ ಹೃದಯದ ಬಳಿ ಇದೆ. ಅವರು ಇದರಿಂದ ಏನನ್ನು ತೋರಿಸುತ್ತಾ ಇದ್ದಾರೆ? ಪಕ್ಕದಲ್ಲಿ ಇರುವ ಮಹಲು ಅವರು ಜೀವಿಸಿದ್ದ ದಕ್ಷಿಣೇಶ್ವರ ಗಂಗಾತೀರದ ಕಾಳೀ ಮಂದಿರವೆ? ಅವರು ನಿಂತಿರುವ ಭಾವಚಿತ್ರದ ಅರ್ಥ ತಿಳಿಸಿಕೊಡಿ. –ಒಬ್ಬ ಭಕ್ತ, ಬೆಂಗಳೂರು

☆ ಇದು ಶ್ರೀರಾಮಕೃಷ್ಣರ ಸಮಾಧಿಸ್ಥಿತಿಯ ಚಿತ್ರ. ಅವರು ಕೇಶವಚಂದ್ರಸೇನನ ಮನೆಯಲ್ಲಿ ಒಮ್ಮೆ ಆಧ್ಯಾತ್ಮಿಕ ವಿಚಾರವಾಗಿ ಮಾತನಾಡುತ್ತಿರುವಾಗ ಸಮಾಧಿಸ್ಥಿತಿಗೆ ಹೋಗುತ್ತಾರೆ. ಆಗ ತೆಗೆದ ಚಿತ್ರವಿದು. ಅವರು ನಿಂತುಕೊಂಡ ಭಂಗಿ ಏನನ್ನು ಸೂಚಿಸುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ, ಕೇವಲ ಊಹಿಸಿಕೊಳ್ಳಬಹುದು ಅಷ್ಟೆ. ಮೇಲೆತ್ತಿರುವ ಬಲಗೈ ಮೇಲಿರುವ ಭಗವಂತನ ಕಡೆ ನಿರ್ದೇಶಿಸುತ್ತಿರಬಹುದು, ಮತ್ತು ಹೃದಯದ ಬಳಿ ಇರುವ ಎಡಗೈ ಹೃದಯಾಂತರಾಳದಲ್ಲಿರುವ ಭಗವಂತನನ್ನು ಸೂಚಿಸುತ್ತಿರಬಹುದು. ಒಟ್ಟು ಅರ್ಥ ಮೇಲಿರುವ ಭಗವಂತನೇ ಹೃದಯಾಂತರಾಳದಲ್ಲಿಯೂ ಇರುವನು, ಎಂದು. ಮೊದಲು ದೇವರು ಎಲ್ಲೋ ದೂರದಲ್ಲಿ ಮೋಡಗಳ ಆಚೆ ಇರುವನು ಎಂಬ ಭಾವನೆ ಇರುತ್ತದೆ. ಸಾಧನೆಯಲ್ಲಿ ಮುಂದುವರಿದಂತೆ ಅವನು ಇಲ್ಲಿಯೇ ಹೃದಯದಲ್ಲಿಯೇ ಇರುವನೆಂಬ ಅನುಭವವಾಗುತ್ತದೆ. ಮೇಲಿರುವ ಭಗವಂತನನ್ನು ನಮ್ಮ ಹೃದಯಾಂತರಾಳದಲ್ಲಿ ಅನುಭವಿಸದಿದ್ದರೆ ಏನೂ ಪ್ರಯೋಜನವಿಲ್ಲ ಎಂದು ತಮ್ಮ ಎಡ ಹಸ್ತದ ಮುದ್ರೆಯ ಮೂಲಕ ಸೂಚಿಸುತ್ತಿರುವಂತಿದೆ.

ದೇವರು ದೂರದಲ್ಲಿರುವನು ಎಂದು ತಿಳಿದಿರುವವರೆಗೆ ದ್ವೈತಭಾವವಿರುತ್ತದೆ ಎಂಬುದನ್ನು ತಮ್ಮ ಬಲಗೈಯ ಎರಡು ಬೆರಳುಗಳ ಮೂಲಕ ಸೂಚಿಸುತ್ತಿರಬಹುದು. ತೋರುಬೆರಳು ಮತ್ತು ಕಿರುಬೆರಳುಗಳನ್ನು ಅವರು ತೋರಿಸುತ್ತಿರುವುದು ತರ-ತಮ ಭಾವವನ್ನು ಸೂಚಿಸುತ್ತದೆ. ಎಡಗೈಯ ಎಲ್ಲ ಬೆರಳುಗಳೂ ತೆರೆದಿರುವುದು ಹೃದಯಪದ್ಮದ ಪೂರ್ಣ ಅರಳಿರುವಿಕೆಯನ್ನು ಸೂಚಿಸುತ್ತದೆ. ಈ ರೀತಿ ಹೃದಯಪದ್ಮ ಅರಳಿದಾಗ ಆಧ್ಯಾತ್ಮಿಕ ಅನುಭವಗಳ ಮಹಾದ್ವಾರ ತೆರೆದಂತೆ ಆಗುತ್ತದೆ. ಆಗ ದ್ವೈತ ಭಾವನೆ, ತರತಮ ಭೇದಭಾವನೆ ಎಲ್ಲ ಮಾಯವಾಗುತ್ತದೆ.

ಮೇಲೆತ್ತಿರುವ ಬಲಗೈ ನಾವು ಆಧ್ಯಾತ್ಮಿಕ ಜೀವನದಲ್ಲಿ ಎತ್ತರಕ್ಕೆ ಏರಬೇಕು ಎಂಬುದನ್ನು ಸೂಚಿಸುತ್ತಿರಬಹುದು. ಹಾಗೆಯೇ ನಮ್ಮ ವ್ಯಕ್ತಿತ್ವದ ಆಳಕ್ಕೆ ಮುಳುಗಬೇಕು ಎಂಬುದನ್ನು ಎಡಗೈ ಮೂಲಕ ಸೂಚಿಸುತ್ತಿರಬಹುದು. ನಮ್ಮ ವ್ಯಕ್ತಿತ್ವದ ಆಳದಲ್ಲಿ ಮಹದಾನಂದವಿದೆ ಎಂಬುದು ಅವರ ಮುಖಕಮಲ ಸೂಚಿಸುತ್ತಿದೆ. ಸುಖಶಾಂತಿಗಳನ್ನು ಹೊರಗೆಲ್ಲೂ ಅರಸಬೇಡ, ನಿನ್ನೊಳಗೇ ಅರಸು ಎಂಬುದನ್ನು ತಮ್ಮ ಎರಡೂ ಕೈಗಳಿಂದ ಸೂಚಿಸುತ್ತಿರುವಂತೆ ಕಂಡುಬರುತ್ತದೆ.

? 'ಬಿಬಿಸಿ ತಿರಸ್ಕರಿಸಿದ ಆರ್ಯರ ಆಕ್ರಮಣ ಸಿದ್ಧಾಂತ' ಮತ್ತು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ 'ಆರ್ಯರು ಮತ್ತು ತಮಿಳರು'ಗಳಲ್ಲಿ ವಿವರಿಸಿದ ಭಾವನೆಗಳ ಕುರಿತು ಸ್ವಲ್ಪ ಸ್ಪಷ್ಟಪಡಿಸಿ.

☆ ಸ್ವಾಮಿ ವಿವೇಕಾನಂದರು ಆರ್ಯರ ಆಕ್ರಮಣ ಸಿದ್ಧಾಂತವನ್ನು ಒಪ್ಪಿದವರಲ್ಲ. ಬಿ.ಬಿ.ಸಿ.ಯ ತಪ್ಪೊಪ್ಪಿಗೆಯಿಂದ ಹಾಗೂ ಆರ್ಯರ ಆಕ್ರಮಣ ಸಿದ್ಧಾಂತವನ್ನು ತಿರಸ್ಕರಿಸಿರುವುದರಿಂದ ಸ್ವಾಮಿ ವಿವೇಕಾನಂದರು ನುಡಿದ ಸತ್ಯವನ್ನು ದೃಢೀಕರಿಸಿದಂತಾಗಿದೆ ಅಷ್ಟೆ. ಈ ಆರ್ಯರ ಆಕ್ರಮಣ ಸಿದ್ಧಾಂತವನ್ನು ಕುರಿತು ತೀವ್ರವಾಗಿ ಖಂಡಿಸಿರುವುದನ್ನು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂಪುಟ ೫ ಪು.೩೬೧ ಕಡೆಯ ಪ್ಯಾರಾದಲ್ಲಿ ನೋಡಿ: "ಇಂಡಿಯಾ ದೇಶದಲ್ಲಿ ಆರ್ಯ ಮತ್ತು ದ್ರಾವಿಡ ಎಂಬ ಪದಗಳು ಕೇವಲ ಭಾಷಾ ಶಾಸ್ತ್ರದ ದೃಷ್ಟಿಯಿಂದ ಮಾತ್ರ ಮುಖ್ಯವಾಗಿವೆ" ಇದರರ್ಥ ಮತ್ತಿನ್ನಾವ ದೃಷ್ಟಿಯಿಂದಲೂ ಅಲ್ಲ ಎಂದು. ಹೀಗೆ ಹೇಳುವುದರ ಮೂಲಕ ಭಾರತದ ಮೇಲೆ ಆರ್ಯರ ಆಕ್ರಮಣ ಸಿದ್ಧಾಂತ ಎಷ್ಟು ಪೊಳ್ಳಾಗಿದೆ ಎಂಬುದನ್ನು ಸ್ವಾಮೀಜಿಯವರು ಸೂಚಿಸಿದ್ದಾರೆ.

? 'ಶ್ರೀರಾಮಕೃಷ್ಣ ಉಪದೇಶಾಮೃತ' ಪು.೨೩ರಲ್ಲಿ ಬರುವ "ಸೇತುವೆಯ ಕೆಳಗಡೆ ನೀರು ಯಾವಾಗಲೂ ಹರಿದು ಹೋಗುತ್ತದೆ. ಅಲ್ಲಿ ತಂಗುವುದಿಲ್ಲ. ಅದರಂತೆಯೇ ಮುಕ್ತನ ಕೈಯಲ್ಲಿ ಹಣ ಸಾಗಿಹೋಗುತ್ತದೆ. ಅವರೆಂದಿಗೂ ಕೂಡಿ ಇಡುವುದಿಲ್ಲ"

**ಎಂಬ ನುಡಿಯನ್ನು ಸ್ವಲ್ಪ ವಿವರಿಸುವಿರಾ?**

☆ ಸೇತುವೆಯ ಕೆಳಗೆ ನೀರು ನಿಲ್ಲದೆ ಹರಿದುಹೋಗುತ್ತದೆ. ಇದಕ್ಕೆ ಕಾರಣ ಸೇತುವೆ ನೀರಿನಿಂದ ಮೇಲಿರುತ್ತದೆ. ಅದ ರಂತೆಯೇ ಮುಕ್ತಪುರುಷನು ಪ್ರಾಪಂಚಿಕ ಆಸೆಗಳನ್ನು ಮೀರಿರುತ್ತಾನೆ. ಅವನ ಕೈಗೆ ಹಣ ಬಂದರೆ ಅದನ್ನು ಕೂಡಿಡುವುದಿಲ್ಲ, ಬದಲು ಇತರರಿಗೆ ಕೊಟ್ಟುಬಿಡುತ್ತಾನೆ. ಅವನಿಗೆ ಯಾವುದೇ ವೈಯಕ್ತಿಕ ಆಸೆಗಳು ಇಲ್ಲದಿರುವುದರಿಂದ ಹಣವನ್ನು ಇಟ್ಟುಕೊಳ್ಳುವ ಆವಶ್ಯಕತೆಯೂ ಅವನಿಗಿರುವುದಿಲ್ಲ.

ಸಾಮಾನ್ಯ ವ್ಯಕ್ತಿಗಳಲ್ಲಿ ವೈಯಕ್ತಿಕ ಆಸೆಗಳು ಮಾತ್ರವಲ್ಲದೆ ಅಭದ್ರತೆಯ (insecurity) ಭಾವನೆಯೂ ಇರುತ್ತದೆ. "ಮುಂದೇನೋ ಆಗಬಹುದು, ಹಣ ಬೇಕಾಗಬಹುದು" ಎಂಬ ಆತಂಕವಿರುತ್ತದೆ. ಅದಕ್ಕಾಗಿ ಹಣ ಕೂಡಿಡುತ್ತಾರೆ. ಮುಕ್ತನಿಗೆ ಯಾವ ಆತಂಕವೂ ಇರುವುದಿಲ್ಲ. ಅನೇಕರಿಗೆ ಹಣವೇ ಬಲ. ಆದರೆ ಮುಕ್ತಪುರುಷನಿಗೆ ಆತ್ಮನೇ ಬಲ.

ಸಾಮಾನ್ಯ ವ್ಯಕ್ತಿಗಳು 'ಅಹಂ' ಪ್ರಧಾನರಾಗಿರುತ್ತಾರೆ. ಈ 'ನಾನು'ವಿನ ಉಳಿವಿಗಾಗಿ ಅವರು ಹಣ, ಸ್ಥಾನ, ಮಾನ, ಅಧಿಕಾರ ಇತ್ಯಾದಿಗಳನ್ನು ಆಶ್ರಯಿಸಬೇಕಾಗುತ್ತದೆ. ವಸ್ತುಗಳ ಸ್ವಾಮ್ಯದಿಂದ (possession) ಅವರು ಆತ್ಮತೃಪ್ತಿಯನ್ನು ಪಡೆಯುತ್ತಾರೆ. ಆದರೆ ಮುಕ್ತಪುರುಷನಿಗೆ ಈ ಅಹಂಕಾರದ ಹಸಿವು ಇರುವುದಿಲ್ಲ. ಆದ್ದರಿಂದ ಅವನಿಗೆ ಏನನ್ನೂ ಸಂಗ್ರಹಿಸಿಟ್ಟುಕೊಳ್ಳುವ ಆವಶ್ಯಕತೆಯೇ ಇರುವುದಿಲ್ಲ.

**? ಮನಸ್ಸು ಯಾವಾಗಲೂ ಭಗವಂತನ ಚಿಂತನೆಯನ್ನು ಅಥವಾ ಸಾಧನೆ ಮಾಡುವಂತೆ ಪ್ರೇರೇಪಿಸುವುದು ಹೇಗೆ? ಕಾಮವನ್ನು ಗೆಲ್ಲುವುದು ಹೇಗೆ? ವಾರಕ್ಕೆ ನಾಲ್ಕು ಅಥವಾ ಐದು ದಿನ ಎಲ್ಲ ಸರಿಯಾಗಿದ್ದರೆ ಕೊನೆಯ ಒಂದು ಅಥವಾ ಎರಡು ದಿನ ಮನಸ್ಸು ಕಾಮದ ಕುರಿತು ಯೋಚಿಸುವುದನ್ನು ನನ್ನಿಂದ ತಡೆಯಲು ಆಗುತ್ತಿಲ್ಲ. ಅದನ್ನು ಹೇಗೆ ನಿಗ್ರಹಿಸುವುದು? ನಾನು ಪ್ರತಿನಿತ್ಯ ಬಸವನಗುಡಿಯಲ್ಲಿನ ರಾಮಕೃಷ್ಣ ಆಶ್ರಮಕ್ಕೆ ಹೋಗಿ ಪ್ರಾರ್ಥಿಸಿ ಬರುತ್ತಿದ್ದೇನೆ.**

☆ ಆದರಪೂರ್ವಕವಾಗಿ ದೀರ್ಘಕಾಲ ನಿರಂತರ ಅಭ್ಯಾಸದ ಮೂಲಕ ಮನಸ್ಸನ್ನು ಭಗವತ್ ಚಿಂತನೆಯಲ್ಲಿ ತೊಡಗಿಸ ಬಹುದು. ಇದಕ್ಕೆ ತುಂಬ ತಾಳ್ಮೆ ಬೇಕಾಗುತ್ತದೆ.

ದೇಹಭಾವದಿಂದಾಗಿಯೇ ಕಾಮವು ನಮ್ಮನ್ನು ಕಾಡು ತ್ತದೆ. ಅದಕ್ಕೆ ವಿರುದ್ಧವಾದ ಆತ್ಮಚಿಂತನೆಯನ್ನು ಮಾಡಬೇಕು. "ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ. ಪರಿಶುದ್ಧ ಆತ್ಮ" ಎಂದು ಆಗಾಗ ಚಿಂತಿಸಬೇಕು. ಪವಿತ್ರತೆಯ ಭಾವನೆಯನ್ನು ಮತ್ತೆ ಮತ್ತೆ ಮನಸ್ಸಿನೊಳಗೆ ತುಂಬಿಸಬೇಕು. ಇದು ಕ್ರಮೇಣ ಹಳೆಯ ಸಂಸ್ಕಾರಗಳನ್ನು ಹೋಗಲಾಡಿಸಿ ಹೊಸ ಸಂಸ್ಕಾರಗಳನ್ನು ನಿರ್ಮಾಣ ಮಾಡುತ್ತದೆ. ಇದಲ್ಲದೆ 'ಯುಕ್ತಾಹಾರ ವಿಹಾರ' ಆಹಾರ ಹಾಗೂ ವಿಹಾರಗಳಲ್ಲಿ ಮಿತವಾಗಿರುವ ಜೀವನ ನಡೆಸಬೇಕು.

(ಮೇಲಿನ ಮೂರು ಪ್ರಶ್ನೆಗಳನ್ನು ಕೇಳಿದವರು **ಬೆಂಗಳೂರಿನ ಪ್ರಭಾಕರ. ಕೆ.ಎಸ್.**)

**? ಹಲ್ಲಿ ಮೈಮೇಲೆ ಬೀಳುವ ಸಂಬಂಧ ಇರುವ ಮೂಢ ನಂಬಿಕೆಯ ಪರಿಹಾರ ಸೂಚಿಸಿರೆಂದು ಪ್ರಾರ್ಥಿಸುತ್ತೇನೆ.**

**—ರಾಮೇಗೌಡ, ಚಿಕ್ಕಬಸವನಹಳ್ಳಿ, ಹಾಸನ.**

☆ ಮೂಢನಂಬಿಕೆಗೆ ಪರಿಹಾರ ಅದನ್ನು ಬಿಡುವುದು. ಮನಸ್ಸು ದುರ್ಬಲವಾದಾಗ, ಆತ್ಮವಿಶ್ವಾಸದ ಕೊರತೆ ಇರು ವಾಗ ಎಲ್ಲ ರೀತಿಯ ಮೂಢನಂಬಿಕೆಗಳು ನಮ್ಮನ್ನು ಪ್ರವೇಶಿಸು ತ್ತವೆ; ಹಲ್ಲಿಶಕುನವೇ ಮುಂತಾದ ಮೂಢನಂಬಿಕೆಗಳು ಉಂಟಾಗುತ್ತವೆ. ಎಲ್ಲವೂ ನಮ್ಮ ಶ್ರದ್ಧೆಯನ್ನು ಅವಲಂಬಿಸಿದೆ. **ಯೋ ಯತ್ ಶ್ರದ್ಧಃ ಸ ಏವ ಸಃ**—ಪ್ರತಿಯೊಬ್ಬನೂ ಅವನ ಶ್ರದ್ಧೆಯಂತೆ ಇರುತ್ತಾನೆ—ಎಂದು ಶ್ರೀಕೃಷ್ಣ ಹೇಳುತ್ತಾನೆ. ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಆದರ್ಶದಲ್ಲಿ ನಮಗೆ ಶ್ರದ್ಧೆ ಇರಬೇಕು. ಆಗ ಆದಕ್ಕನುಗುಣವಾಗಿ ನಮ್ಮ ಜೀವನ ರೂಪಿತವಾಗುತ್ತದೆ. ಆಗ ನಮ್ಮ ಚಾರಿತ್ರ್ಯಬಲ ವೃದ್ಧಿಯಾಗು ತ್ತದೆ. ಇದು ಎಲ್ಲ ಮೂಢನಂಬಿಕೆಗಳನ್ನೂ ಹೊಡೆದೋಡಿಸು ತ್ತದೆ. ನಮ್ಮ ದೇಹ ದುರ್ಬಲವಾದಾಗ ರೋಗಾಣುಗಳು ದೇಹವನ್ನು ಪ್ರವೇಶಿಸಿ ವಿವಿಧ ರೋಗಗಳನ್ನು ಉಂಟುಮಾಡು ತ್ತವೆ. ಹಾಗೆಯೇ ನಮ್ಮ ಮನಸ್ಸು ದುರ್ಬಲವಾದಾಗ ಅನೇಕ ಬಗೆಯ ಮೂಢನಂಬಿಕೆಗಳು ಪ್ರವೇಶಿಸಿ ಅದನ್ನು ಇನ್ನಷ್ಟು ದುರ್ಬಲಗೊಳಿಸುತ್ತವೆ. ಸಾಮಾನ್ಯ ಹಲ್ಲಿ, ಬೆಕ್ಕು, ನರಿ ಮುಂತಾದವುಗಳು ನಮ್ಮ ಜೀವನದ ಗತಿಯನ್ನು ನಿರ್ದೇಶಿಸ ಬೇಕೆ?

### ನೋಡುವ, ಭಾವಿಸುವ ದೃಷ್ಟಿ

ಪ್ರಸಿದ್ಧ ಸಂಗೀತಗಾರ ಜುಬಿನ್ ಮೆಹ್ತಾ ೧೯೯೧ರಲ್ಲಿ ಭಾರತಕ್ಕೆ ಬಂದು ಕಚೇರಿಯೊಂದನ್ನು ನೀಡಿದ. ಅವನಿಗೆ ಸನ್ಮಾನ ಮಾಡಿದಾಗ ಕೊರಳಿಗೆ ಗುಲಾಬಿ ಹೂಗಳ ಹಾರವನ್ನು ಹಾಕಿದ್ದರು. ಕಚೇರಿಯನ್ನು ನಡೆಸುತ್ತಿದ್ದಾಗ ಕೈ ಬಿರುಸಾಗಿ ಚಲಿಸುತ್ತಿದ್ದುದರಿಂದ ಹೂವಿನ ಎಸಳುಗಳು ಬೀಳಲಾರಂಭಿಸಿದವು. "ಕಡೆಗೆ ಅವನ ಕೊರಳ ಸುತ್ತ ದಾರ ಮಾತ್ರ ಉಳಿಯುವುದು" ಎಂದು ಸಭೆಯಲ್ಲಿದ್ದ ಒಬ್ಬ ವ್ಯಕ್ತಿ ಹೇಳಿದ. ಪಕ್ಕದಲ್ಲಿದ್ದ ಅವನ ಹೆಂಡತಿ ಹೇಳಿದಳು, "ಆದರೆ ಕಾರ್ಯಕ್ರಮ ಮುಗಿದಾಗ ಅವನು ಗುಲಾಬಿ ಹೂಗಳ ದಳಗಳ ಹಾಸಿಗೆಯ ಮೇಲೆ ನಿಂತಿರುತ್ತಾನೆ."